ಅಧ್ಯಕ್ಷರು :— ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ :— ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ 1999ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರವೇಕೆರೆ) :— ಮಾನ್ಯ ಅಧ್ಯಕ್ಷರೆ (ಅ) ತುರುವೇಕೆರೆ ತಾಲ್ಲೂಕು ಕಸಬಾ ಹೋಬಳಿ ಪುರದಪಾಳ್ಯಕ್ಕೆ ಹೇಮಾವತಿ ನೀರು ಹರಿದು ಬರುವ ಪ್ರದೇಶದ 20 ಹಳ್ಳಿಗಳ ಜನರಿಗೆ ಸಂಚಾರ ಸಂಪರ್ಕಕ್ಕಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಹಾಗೂ (ಆ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯ ಸಿದ್ಧಾಪುರ ಹಾಗೂ ದ್ಯಾಮಸಂದ್ರ ಗ್ರಾಮಗಳನ್ನು ಸ್ಥಳಾಂತರಿಸಿ ಪುನರ್ ವಸತಿ ಕಲ್ಪಿಸುವ ಬಗ್ಗೆ ಸದನಕ್ಕೆ ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, (ಅ) ಕರ್ನಾಟಕ ರಾಜ್ಯದ ಆಯುರ್ವೇದ ಉದ್ಯಮದ ಪರಿವೀಕ್ಷಕರು ಕರ್ನಾಟಕ ಭಾರತೀಯ ವೈದ್ಯ ಪದ್ಧತಿಯ ಔಷಧ ತಯಾರಕರ ಮೇಲೆ ಶೋಷಣೆ ಮಾಡುತ್ತಿರುವ ಬಗ್ಗೆ ಹಾಗೂ (ಆ) ಶ್ರೀಮತಿ ಕೆ.ಎ. ನಾಗರತ್ನ ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಉಪನ್ಯಾಸಕಿಯ ಹುದ್ದೆಯಿಂದ ವಂಚಿತೆಯಾದ ಬಗ್ಗೆ ಸದನಕ್ಕೆ ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :— ಅರ್ಜಿಗಳನ್ನು ಒಪ್ಪಿಸಲಾಯಿತು.

(4) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯಲ್ಲಿ ಅಧಿಕಾರಿ ಹುದ್ದೆಗಳು ಖಾಲಿಯಿದ್ದರೂ ಬಡ್ತಿ ನೀಡದಿರುವ ಬಗ್ಗೆ.

ಶ್ರೀ ಸಿ. ಭೈರೇಗೌಡ (ವೇಮಗಲ್) :— ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ತಮಗೆ ಒಂದು ಪತ್ರವನ್ನು ಕಳುಹಿಸಿದ್ದೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಬಡ್ತಿ ಕೊಡುವ ಬಗ್ಗೆ ಒಂದು ಸಮಿತಿ ಇದೆ, ಆ ಸಮಿತಿಯು ಸಭೆ ಸೇರಿ, ಆ ಪಟ್ಟಿಯನ್ನು ಕೂಡ ಉನ್ನತ ಮಟ್ಟದ ತೀರ್ಮಾನಕ್ಕೋಸ್ಕರ ಶಿಫಾರಸ್ಸು ಸಹ

ಮಾಡಿದ್ದಾರೆ. ಅವರು ಸುಮಾರು 7-8 ತಿಂಗಳಿಗಿಂತ ಮುಂಚೆ ಶಿಫಾರಸ್ಸನ್ನು ಮಾಡಿದ್ದರೂ ಸಹ ಇಲ್ಲಿಯವರೆವಿಗೂ ಕೂಡ ಬಡ್ತಿಯ ಆಜ್ಞೆಯನ್ನು ಅವರು ಹೊರಡಿಸಿರುವುದಿಲ್ಲ. ಇದರ ಬಗ್ಗೆ ನಾನು ತಮಗೆ ಈಗಾಗಲೇ ತಿಳಿಸಿದ್ದೇನೆ. ಆದರ ಬಗ್ಗೆ ಪ್ರಸ್ತಾಪ ಮಾಡೋಣವೆಂದರೆ, ಮಾನ್ಯ ಮಂತ್ರಿಗಳು ಇಲ್ಲ.

ಅಧ್ಯಕ್ಷರು :— ಮಾನ್ಯ ಭೈರೇಗೌಡರೆ, ನಾನು ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ನನ್ನ ತಿಳುವಳಿಕೆಯ ಪ್ರಕಾರ ಇವತ್ತು ಅಥವಾ ನಾಳೆ ಈ ವಿಚಾರದಲ್ಲಿ ಅವರು ಆದೇಶ ಹೊರಡಿಸಲು ಕ್ರಮವನ್ನು ಕೈಗೊಳ್ಳುತ್ತಾರೆ. 351 ನಿಯಮದ ಪ್ರಕಾರ ನೀವು ಈ ವಿಷಯವನ್ನು ಪ್ರಸ್ತಾಪಿಸಬಹುದಷ್ಟೇ, ಇದಕ್ಕೆ ಕಡ್ಡಾಯವಾಗಿ ನೀವು ಉತ್ತರವನ್ನು ಬಯಸುವಂತಿಲ್ಲ. ಇದರ ಬಗ್ಗೆ ಸಭೆಯೇ ತೀರ್ಮಾನವನ್ನು ಮಾಡಿದೆ, ಇದರ ಬಗ್ಗೆ ನಾನೇನು ಹೊಸದಾಗಿ ತಿಳಿಸುತ್ತಿಲ್ಲ. ಅವರು ಏನು ತಿಳಿಸಿದರೆಂದರೆ ನನಗೆ ವಿಷಯ ಪ್ರಸ್ತಾವನೆಗಷ್ಟೇ ಅವಕಾಶವನ್ನು ಕೊಡಿ, ಉತ್ತರವೇನು ಬೇಡವೆಂದು ತಿಳಿಸಿದರು.

ಶ್ರೀ ಸಿ. ಭೈರೇಗೌಡ :— ಇದಕ್ಕೆ ಉತ್ತರವನ್ನು ಇವತ್ತೇ ಕೊಡಿ ಎಂದು ಹೇಳಿದೆ, ಆದರೆ ಇದರ ಬಗ್ಗೆ ನಾಳೆಯಾದರೂ ಉತ್ತರವನ್ನು ತಾವು ಕೊಡಿಸಬೇಕು.

ಅಧ್ಯಕ್ಷರು :— ಇದರ ಬಗ್ಗೆ ಉತ್ತರವನ್ನು ನಾಳೆ ಅಥವಾ ನಾಡಿದ್ದು ಕೊಡುವುದಕ್ಕೆ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

ವಿಷಯ (ಅ) ಮಂಗಳೂರಿನ ಅಬ್ಬಾರಿ ಇಲಾಖೆಯಲ್ಲಿ ಶ್ರೀ ಬಿ.ಕೆ. ಯಶೋಧರ ಎಂಬುವರಿಗೆ ದುರುದ್ದೇಶಪೂರಕವಾಗಿ ಅಲ್ಲಿನ ಜಿಲ್ಲಾಧಿಕಾರಿಗಳು ಅಮಾನತ್ತು ಮಾಡಿರುವುದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಅಬ್ಬಾರಿ ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದ ಶ್ರೀ ಬಿ.ಕೆ. ಯಶೋಧರ ಎಂಬುವವರು ಕೆಲಸ ಮಾಡುತ್ತಿದ್ದಾರೆ. ಇವರು 1988ರಲ್ಲಿ ಅರ್ಜುನ್ ಪ್ರಶಸ್ತಿ ಹಾಗೂ 1992ರಲ್ಲಿ ಏಕಲವ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪವರ್ ಲಿಫ್ಟಿಂಗ್‌ನಲ್ಲಿ ಇವರು ಭಾರತವನ್ನು ಪ್ರತಿನಿಧಿಸತಕ್ಕದ್ದು, ಇವರಿಗೆ

12.30 ಪಿ.ಎಂ.

ದುರುದ್ದೇಶಪೂರ್ವಕವಾಗಿ ಅಲ್ಲಿರುವಂತಹ ಜಿಲ್ಲಾಧಿಕಾರಿ ಶ್ರೀ ಜ್ಯೋತಿರ್ಲಿಂಗಂರವರು ಅಮಾನತು ಮಾಡಿ ಕಳೆದ 9 ತಿಂಗಳುಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ಕ್ರೀಡಾ ಇಲಾಖೆಯವರು ಶ್ರೀ ಮಿಲ್ಖಾಸಿಂಗ್‌ರವರಿಗೆ ಪಂಜಾಬ್‌ನಲ್ಲಿ ಯಾವರೀತಿ ಪ್ರೋತ್ಸಾಹ ಕೊಟ್ಟಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಾ, ಈ ಸಂದರ್ಭದಲ್ಲಿ ಇಷ್ಟು ಪ್ರಶಸ್ತಿಯನ್ನು ಪಡೆದಿರುವ ವ್ಯಕ್ತಿಗೆ ಈ ತರಹ ಹೀನಾಯವಾಗಿ ಕಾಣುವುದು ಸರಿಯಲ್ಲ. ಅವರಿಗೆ ಪ್ರೋತ್ಸಾಹ ಕೊಡುವುದು ಬೇಡ. ಅವರಿಗೆ ಸಂಬಳವನ್ನು ಕೊಡದಿರುವಂತಹ ಒಂದು